ಕೂಡಲೇ ನನ್ನ ತಲೆಯನ್ನು ಬಗ್ಗಿಸಿಕೊಂಡು ಕಿವಿಯಲ್ಲಿ 'ಆಹಾ ಇವನೆಂಥ ಹಾರ್ಟ್ ಸ್ಪೆಷಲಿಸ್ಟೋ ಇವನ ಮುಖಕ್ಕಿಷ್ಟು. ದೇವರ ಮೇಲೆ ಭಾರ ಹಾಕಲು ಆಸ್ಪತ್ರೆಗೆ ಬರಬೇಕಾ? ಸೀದಾ ದೇವಸ್ಥಾನಕ್ಕೆ ಹೋಗಬಹುದಿತ್ತಲ್ಲ. ಬ್ಲಡಿ ಹಾರ್ಟ್ ಲೆಸ್ ಫೆಲೋ...' ಎಂದು ಮೆಲ್ಲನೆ ನಕ್ಕಿದ್ದಳು. ಅಲ್ಲೇ ಹತ್ತಿರ ಬಂದ ಸೀನಿಯರ್ ನರ್ಸ್ ಅರುಂಧತಿ 'ವಿ ಹ್ಯಾವ್ ಟು ಲರ್ನ್ ಎ ಲಾಟ್ ಫ್ರಮ್ ದಟ್ ಸೀನಿಯರ್ ಡಾಕ್ಟರ್. ಇಪ್ಪತ್ತು ವರ್ಷಗಳಿಂದ ಅವರಿಗೆ ಕಾರ್ಡಿಯಾಕ್ ಪ್ರಾಬ್ಲಂ ಇದ್ದರೂ ನೂರಾರು ಹಾರ್ಟ್ ಸರ್ಜರಿಗಳನ್ನು ಮಾಡಿದ್ದಾರೆ, ಯು ನೋ, ಹೀ ಹಿಮ್‌ಸೆಲ್ಫ್ ಹ್ಯಾಸ್ ಅಂಡರ್ಗಾನ್ ಓಪನ್ ಹಾರ್ಟ್ ಸರ್ಜರಿ ಟೆನ್ ಇಯರ್ಸ್ ಬ್ಯಾಕ್. ನಿಮಗೆ ಧೈರ್ಯ ಬರಲೆಂದು ಈ ವಿಷಯ ಹೇಳಿದೆ. ಇನ್ನು ಹತ್ತು ನಿಮಿಷ ನೀವಿರಬಹುದು. ಪೇಶೆಂಟುಗಳೊಂದಿಗೆ ಹೆಚ್ಚು ಮಾತನಾಡಬಾರದು. ದೆ ನೀಡ್ ಮೋರ್ ರೆಸ್ಟ್ ಸಿನ್ಸ್ ದೆ ಆರ್ ಅಂಡರ್ ಇಮ್ಮೆನ್ಸ್ ಮೆಡಿಕೇಷನ್. ಮತ್ತೆ ಸಂಜೆ ನಾಲ್ಕು ಗಂಟೆಯವರೆಗೂ ಇಲ್ಲಿ ನೀವು ಸುಳಿಯುವಂತಿಲ್ಲ. ಎಮರ್ಜೆನ್ಸಿ ಇದ್ದರೆ ನಾವೇ ಕರೆಯುತ್ತೇವೆ. ನೀವು ಅಟೆಂಡರ್ಸ್ ಲಾಂಜ್‌ನಲ್ಲಿ ಕುಳಿತು ಹಾಯಾಗಿ ಬೇಕಾದರೆ ಮೊಬೈಲ್ ನಲ್ಲಿ ಮುಳುಗಬಹುದು' ಎಂದು ನನ್ನ ಕಡೆ ನಕ್ಕು ಮುಂದಿನ ಬೆಡ್ ಕಡೆ ನಡೆದಿದ್ದಳು. 'ನಾನು ಹೇಳಲಿಲ್ಲವಾ... ಡಾಕ್ಟರ್ ಈಸ್ ಹಾರ್ಟ್ಲೆಸ್ ಎಂದು...' ಎಂದು ಇವಳೂ ನಕ್ಕು ನಕ್ಕು ನೀರಾಗತೊಡಗಿದ್ದಳು. ನೀರಾಗುತ್ತಾ ನಿದ್ದೆಗೆ ಜಾರತೊಡಗಿದಳು.

ಆಸ್ಪತ್ರೆಯ ಅಟೆಂಡರ್ಸ್ ಲಾಂಜ್‌ನಲ್ಲಿ ಗದ್ದಲವೋ ಗದ್ದಲ. ಅರೆ, ಇವರೆಲ್ಲ ನನ್ನಂತೆ ಆಸ್ಪತ್ರೆಯ ವಾರ್ಡ್‌ಗಳಲ್ಲಿರುವ ಅವರ ಕಡೆಯ ರೋಗಿಗಳನ್ನು ಕಾಯುತ್ತಿರಬೇಕು. 'ಯಾರಿದ್ದಾರೆ ನಿಮ್ಮವರು ಇಲ್ಲಿ' ಪಕ್ಕದಲ್ಲಿದ್ದವರು ಕೇಳಿದ್ದರು. 'ಅರೆ, ಯಾರೆಂದು ಹೇಳಲಿ. ನನ್ನ ಚಂದ್ರಮ, ನನ್ನ ಪ್ರಾಣ, ನನ್ನ ಕನಸು, ನನ್ನ ಮೋಹ, ನನ್ನ ವ್ಯಾಮೋಹ, ನನ್ನ ಹೆಂಡತಿ. ಮದುವೆಯಾಗಿ ಮುವತ್ತು ವರ್ಷಗಳಲ್ಲಿ ಒಮ್ಮೆಯೂ ಆಸ್ಪತ್ರೆಯ ಮೆಟ್ಟಿಲು ತುಳಿದವಳಲ್ಲ, ಒಂದು ನೋವೆಂದು ಎಂದೂ ಹೇಳಿಕೊಂಡವಳಲ್ಲ. ಜಸ್ಟ್ ಫಿಫ್ಟಿ ಟೂ ಇಯರ್ಸ್. ಬೇಕಾದ್ರೆ ಐಸಿಯುವಿನ ನಂಬರ್ ಒನ್ ಬೆಡ್‌ನಲ್ಲಿ ನಿದ್ದೆ ಮಾಡ್ತಾ ಇದಾಳೆ ನೋಡಿಕೊಂಡು ಬನ್ನಿ. ಬೆಡ್ ನಂಬರ್ ಒನ್ ಎಂದಾಗ ನೆನಪಾಯ್ತು ನೋಡಿ; ಅವಳ ಡೇಟ್ ಆಫ್ ಬರ್ತ್ ಫಸ್ಟ್ ಮೇ. 'ಆ ಹಾ, ನನ್ನ ಬರ್ತ್ ಡೇನ ಇಡೀ ಜಗತ್ತೇ ಸೆಲೆಬ್ರೇಟ್ ಮಾಡ್ತದೆ ನೋಡಿ. ಯಂಗೆ ನಾವ್!' ಎಂದು ಟಾಪ್ ಮೇಲೆ ಹಾಕುತ್ತಿದ್ದ ವೇಲನ್ನೇ ಕಾಲರ್ ಎಂದು ತಿಳಿದು ಎಗರಿಸುತ್ತಿದ್ದಳು. ಐವತ್ತೆರಡು ಎಂದರೆ ನೀವು ನಂಬುವುದೇ ಇಲ್ಲ. ನಿನ್ನೆ ಅವಳ ಕೇಸ್ ಶೀಟ್ ನೋಡಿದ ಡಾಕ್ಟರೇ 'ಅರೆ, ಈಕೆ ನಿಮ್ಮ ಹೆಂಡತಿಯ? ನಾನೆಲ್ಲೋ ನಿಮ್ಮ ಮಗಳೋ, ತಂಗಿಯೋ ಎಂದು ಎಣಿಸಿದ್ದೆ' ಎಂದಾಗ ನಾನು ಹಿಮಾಲಯ ಪರ್ವತದ ಮೇಲೆ ಕುಳಿತು ನಕ್ಕಿದ್ದೆ...' ನನ್ನ ಮಾತುಗಳನ್ನು ಕೇಳಿದ ಪಕ್ಕದಲ್ಲಿದ್ದವರು, 'sorry please sorry ನಿಮ್ಮನ್ನು ಕೇಳಬಾರದಿತ್ತು ಕೇಳಿಬಿಟ್ಟೆ. ಐ ಜಸ್ಟ್ ಅಂಡರ್‌ಸ್ಟ್ಯಾಂಡ್ ಯುವರ್ ಮ್ಯಾಡ್ನೆಸ್ ಅಬೌಟ್ ಯುವರ್ ವೀಕ್ನೆಸ್...' ಎಂದವರ ಮುಖ ನೋಡಿದೆ. ಅರೆ, ಆಕೆಯೂ ಐವತ್ತು ದಾಟಿರಬಹುದಾದ ಹೆಂಗಸು. ಮುಖದಲ್ಲಿ ವ್ಯಥೆಯಿದ್ದರೂ ಆತಂಕವೇನೂ ಮನೆ ಮಾಡಿರಲಿಲ್ಲ. 'ಕ್ಷಮಿಸಿ, ದುಃಖ ಸಂಭ್ರಮಗಳೆರಡರಲ್ಲೂ ಎಂಥಾ ಗುಗ್ಗುಗಳ ಬಾಯಲ್ಲಾದರೂ ಈ ಇಂಗ್ಲಿಷ್ ಪದಗಳು ಉದುರುವ ಪರಿಗೆ ನನಗೂ ಅಚ್ಚರಿಯುಂಟು. ಅದಿರಲಿ, ಐಸಿಯು ವಿನಲ್ಲಿ ನಿಮ್ಮ ಹಸ್ಬೆಂಡ್ ಇದಾರಾ? ಏನಾಗಿತ್ತು? ಹಾರ್ಟ್ ಪ್ರಾಬ್ಲಮ್ಮಾ ಅಥವಾ...' ನನ್ನ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ 'ಅಂ, ನನ್ನ ಲೈಫ್ ಪಾರ್ಟನರ್ ಆಸ್ಪತ್ರೆಗೆ ಸೇರಿಸಿ ಹದಿನೆಂಟು ದಿನಗಳಾದವು ಇಂದಿಗೆ. ಸೇರಿಸಿದ ದಿನ ಪ್ರಜ್ಞೆ ಕಳೆದುಕೊಂಡವರು ನಿನ್ನೆ ರಾತ್ರಿ ಎಂಟೂವರೆ ಗಂಟೆಗೆ ಪ್ರಜ್ಞೆಗೆ ಮರಳಿದರು. ಸೋಡಿಯಂ ಕಡಿಮೆಯಾಗಿತ್ತಂತೆ. ಶಿವನೇ. ಉಪ್ಪು ಕಡಿಮೆಯಾದರೆ ಪ್ರಜ್ಞೆ ತಪ್ಪುತ್ತದೆ ಅಂಥ ನನಗೆ ನನ್ನ ಗಂಡ ಪ್ರಜ್ಞೆ ತಪ್ಪಿ ಆಸ್ಪತ್ರೆ ಸೇರಿದಾಗಲೇ ತಿಳಿದಿದ್ದು. ವಯಸ್ಸಾಯಿತಲ್ಲ. ಬಿಪಿಗೀಪಿ ಶುರುವಾಗಬಹುದು ಎಂಬ ಮುಂಜಾಗ್ರತೆಯಿಂದ ನಾನೇ ಅವರ ಊಟದಲ್ಲಿ ಉಪ್ಪು ಕಡಿಮೆ ಮಾಡಿದ್ದೆ. ನೋಡಿ, ಅದಕ್ಕೆ ಹೇಳೋದು ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ ಎಂಬ ಗಾದೆ ಸುಳ್ಳಲ್ಲ ಅಂತ. ಇನ್ನೂ ಒಂದು ವಾರ ಇರಬೇಕಂತೆ. ಇನ್ನೇನು ತೊಂದರೆ ಇಲ್ಲ ದೇವರೂ ಕೂಡ ಕೊ- ಆಪರೇಟ್ ಮಾಡಿದ್ದಾನೆ ಅಂತ ಡಾಕ್ಟರ್ ಹೇಳಿದ್ದಾರೆ. ಹದಿನೆಂಟು